# D

# CCE PR
**Revised & Un-Revised**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2018**

**S.S.L.C. EXAMINATION, JUNE, 2018**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 27. 06. 2018 ] ಸಂಕೇತ ಸಂಖ್ಯೆ : **85-K**

Date : 27. 06. 2018 ] CODE NO. : **85-K**

## ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** 10 × 1 = 10 | |
| 1. | ಸಹಾಯಕ ಸೈನ್ಯಪದ್ಧತಿಯನ್ನು ಪರಿಚಯಿಸಿದ ಬ್ರಿಟಿಷ್ ಗವರ್ನರ್ ಜನರಲ್<br>(A) ವಾರನ್ ಹೇಸ್ಟಿಂಗ್ಸ್ (B) ಲಾರ್ಡ್ ವೆಲ್ಲೆಸ್ಲಿ<br>(C) ಲಾರ್ಡ್ ಡಾಲ್‌ಹೌಸಿ (D) ಲಾರ್ಡ್ ಕಾರ್ನ್‌ವಾಲೀಸ್<br>***ಉತ್ತರ :*** (B) ಲಾರ್ಡ್ ವೆಲ್ಲೆಸ್ಲಿ | 1 |
| 2. | 6 ರಿಂದ 14 ವರ್ಷದ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಭಾರತ ಸರ್ಕಾರವು 2001ರಲ್ಲಿ ಜಾರಿಗೆ ತಂದ ಯೋಜನೆ<br>(A) ರಾಷ್ಟ್ರೀಯ ಸಾಕ್ಷರತಾ ಮಿಷನ್ (B) ಸಾಕ್ಷರ ಭಾರತ<br>(C) ಸರ್ವ ಶಿಕ್ಷಣ ಅಭಿಯಾನ (D) ರಾಷ್ಟ್ರೀಯ ವಯಸ್ಕರ ಶಿಕ್ಷಣ<br>***ಉತ್ತರ :*** (C) ಸರ್ವ ಶಿಕ್ಷಣ ಅಭಿಯಾನ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | **A ಪಟ್ಟಿ**ಯಲ್ಲಿ ನಾಯಕರು ಮತ್ತು **B ಪಟ್ಟಿ**ಯಲ್ಲಿ ಅವರ ದೇಶಗಳನ್ನು ನೀಡಲಾಗಿದೆ. ಅವುಗಳಿಗೆ ಸರಿಹೊಂದುವ ಉತ್ತರದ ಗುಂಪನ್ನು ಗುರುತಿಸಿ : | |

| ***A ಪಟ್ಟಿ*** | ***A ಪಟ್ಟಿ*** |
|---|---|
| (a) ಲೆನಿನ್ | (i) ಚೀನಾ |
| (b) ಹಿಟ್ಲರ್ | (ii) ರಷ್ಯಾ |
| (c) ಮುಸೋಲಿನಿ | (iii) ಜರ್ಮನಿ |
| (d) ಮಾವೋ ತ್ಸೆ ತುಂಗ್ | (iv) ಇಟಲಿ |

| | ***a*** | ***b*** | ***c*** | ***d*** |
|---|---|---|---|---|
| (A) | ii | iii | iv | i |
| (B) | i | ii | iii | iv |
| (C) | iv | i | ii | iii |
| (D) | iii | iv | i | ii |

***ಉತ್ತರ :*** (A) (a) — (ii), (b) — (iii), (c) — (iv), (d) — (i) — 1

4. ವಿಶ್ವಸಂಸ್ಥೆಯ ಪ್ರಧಾನ ಕಚೇರಿ ಇರುವ ಸ್ಥಳ

(A) ನ್ಯೂಯಾರ್ಕ್ (B) ಪ್ಯಾರಿಸ್

(C) ರೋಮ್ (D) ಜಿನೇವಾ

***ಉತ್ತರ :*** (A) ನ್ಯೂಯಾರ್ಕ್ — 1

5. ..................... ಬಾಲಕಾರ್ಮಿಕತನವನ್ನು ನಿಷೇಧಿಸುವ ಭಾರತ ಸಂವಿಧಾನದ ವಿಧಿ.

(A) 21ನೇ ವಿಧಿ (B) 17ನೇ ವಿಧಿ

(C) 52ನೇ ವಿಧಿ (D) 24ನೇ ವಿಧಿ

***ಉತ್ತರ :*** (D) 24ನೇ ವಿಧಿ — 1

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 6. | ಈ ನಕ್ಷೆಯಲ್ಲಿ ಗುರುತಿಸಿರುವ ಅರಣ್ಯ ವಿಧಗಳಿಗೆ ಸರಿಯಾಗಿ ಹೋಲಿಕೆಯಾಗುವುದು : | |




| | | |
|---|---|---|
| | (A) 1 — ಮ್ಯಾಂಗ್ರೋವ್ ಅರಣ್ಯಗಳು, 2 — ಮರುಭೂಮಿ ಅರಣ್ಯಗಳು, 3 — ನಿತ್ಯಹರಿದ್ವರ್ಣದ ಅರಣ್ಯಗಳು | |
| | (B) 1 — ನಿತ್ಯಹರಿದ್ವರ್ಣದ ಅರಣ್ಯಗಳು, 2 — ಮ್ಯಾಂಗ್ರೋವ್ ಅರಣ್ಯಗಳು, 3 — ಮರುಭೂಮಿ ಅರಣ್ಯಗಳು | |
| | (C) 1 — ಮ್ಯಾಂಗ್ರೋವ್ ಅರಣ್ಯಗಳು, 2 — ಹಿಮಾಲಯದ ಅಲ್ಪೈನ್ ಅರಣ್ಯಗಳು, 3 — ನಿತ್ಯಹರಿದ್ವರ್ಣದ ಅರಣ್ಯಗಳು | |
| | (D) 1 — ಮರುಭೂಮಿ ಅರಣ್ಯಗಳು, 2 — ನಿತ್ಯಹರಿದ್ವರ್ಣದ ಅರಣ್ಯಗಳು, 3 — ಮ್ಯಾಂಗ್ರೋವ್ ಅರಣ್ಯಗಳು | |
| | ***ಉತ್ತರ :*** (D) 1 — ಮರುಭೂಮಿ ಅರಣ್ಯಗಳು, 2 — ನಿತ್ಯಹರಿದ್ವರ್ಣದ ಅರಣ್ಯಗಳು, 3 — ಮ್ಯಾಂಗ್ರೋವ್ ಅರಣ್ಯಗಳು | 1 |
| 7. | ಭಾರತವು ತನ್ನದೇ ಆದ ಪ್ರಾದೇಶಿಕ ಜಿ.ಪಿ.ಎಸ್. ವ್ಯವಸ್ಥೆಯನ್ನು ಹೊಂದಲು ಉಡಾಯಿಸಿರುವ ಉಪಗ್ರಹಗಳ ಸಂಖ್ಯೆ | |
| | (A) 3 (B) 5 | |
| | (C) 6 (D) 7 | |
| | ***ಉತ್ತರ :*** (D) 7 | 1 |
| 8. | ಈ ಕೆಳಗಿನವುಗಳಲ್ಲಿ ಪರೋಕ್ಷ ತೆರಿಗೆ | |
| | (A) ವರಮಾನ ತೆರಿಗೆ (B) ಆಮದು–ರಫ್ತು ತೆರಿಗೆ | |
| | (C) ಸಂಪತ್ತಿನ ತೆರಿಗೆ (D) ಕಂಪನಿ ತೆರಿಗೆ | |
| | ***ಉತ್ತರ :*** (B) ಆಮದು–ರಫ್ತು ತೆರಿಗೆ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 9. | ಬ್ಯಾಂಕುಗಳ ಬ್ಯಾಂಕ್<br>(A) ವಿಜಯಾ ಬ್ಯಾಂಕ್ (B) ಕೆನರಾ ಬ್ಯಾಂಕ್<br>(C) ಭಾರತೀಯ ರಿಸರ್ವ್ ಬ್ಯಾಂಕ್ (D) ಕಾರ್ಪೋರೇಷನ್ ಬ್ಯಾಂಕ್<br>***ಉತ್ತರ :*** (C) ಭಾರತೀಯ ರಿಸರ್ವ್ ಬ್ಯಾಂಕ್ | 1 |
| 10. | ವರ್ಗೀಸ್ ಕುರಿಯನ್‌ರವರು 'ಬಿಳಿ ಕ್ರಾಂತಿಯ ಪಿತಾಮಹ' ಎಂದು ಹೆಸರುವಾಸಿಯಾಗಲು ಕಾರಣವಾದ ಅವರ ಸಾಧನೆ<br>(A) ಅಪೋಲೋ ವೈದ್ಯಶಾಲೆಗಳ ಪ್ರಾರಂಭ<br>(B) ಜೆಟ್ ವಾಯುಮಾರ್ಗಗಳ ಪ್ರಾರಂಭ<br>(C) ರಿಲಯನ್ಸ್ ಸಂಸ್ಥೆಯ ಪ್ರಾರಂಭ<br>(D) ಆನಂದ್/ಅಮುಲ್ ಹೈನುಗಾರಿಕೆ ಪ್ರಾರಂಭ<br>***ಉತ್ತರ :*** (D) ಆನಂದ್/ಅಮುಲ್ ಹೈನುಗಾರಿಕೆ ಪ್ರಾರಂಭ | 1 |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** $14 \times 1 = 14$ | |
| 11. | ಜನಸಾಮಾನ್ಯರ ಚರಿತ್ರೆಯನ್ನು ಬರೆಯುವುದು ಚರಿತ್ರೆಕಾರರಿಗೆ ಒಂದು ಸವಾಲು ಏಕೆ ?<br>***ಉತ್ತರ :***<br>i) ಶೇ. 70ಕ್ಕೂ ಹೆಚ್ಚು ಜನರು ಅನಕ್ಷರಸ್ಥರು<br>ii) ಜ್ಞಾನ ಕೇಂದ್ರಗಳಿಂದ ದೂರ<br>iii) ಜನಸಾಮಾನ್ಯರ ಬಗ್ಗೆ ಐತಿಹಾಸಿಕ ದಾಖಲೆಗಳಿಲ್ಲದಿರುವುದು<br>(ಯಾವುದಾದರೂ ಒಂದು) | 1 |
| 12. | ಹಿಟ್ಲರ್‌ನು ಸರ್ವಾಧಿಕಾರಿಯಾಗಲು ಜರ್ಮನಿಯ ಉದ್ಯಮಿಗಳು ಹೇಗೆ ಸಹಾಯ ಮಾಡಿದರು ?<br>***ಉತ್ತರ :***<br>i) ಕಮ್ಯೂನಿಸ್ಟ್ ಮತ್ತು ಸೋಷಿಯಲಿಸ್ಟ್‌ರನ್ನು ಹತ್ತಿಕ್ಕಲು<br>ii) ರಾಜಕೀಯ ಪಕ್ಷಗಳ ನಿಷೇಧ<br>iii) ಕಾರ್ಮಿಕ ಸಂಘಗಳ ರದ್ಧತಿಗೆ ಸಹಾಯ (ಯಾವುದಾದರೂ ಒಂದು) | 1 |
| 13. | ಜಪಾನ್‌ನ ಯಾವ ಒಂದು ತಪ್ಪು ಹಿರೋಷಿಮಾ ಮತ್ತು ನಾಗಾಸಾಕಿಯ ಜನರು ಇಂದಿಗೂ ದುಷ್ಪರಿಣಾಮಗಳನ್ನು ಎದುರಿಸುವಂತೆ ಮಾಡಿತು ?<br>***ಉತ್ತರ :***<br>ಪರ್ಲ್ ಹಾರ್ಬರ್ ಮೇಲೆ ದಾಳಿ ಪ್ರತಿಕಾರವಾಗಿ ಅಮೆರಿಕಾದಿಂದ ಅಣುಬಾಂಬ್ ದಾಳಿ – ಹಿರೋಷಿಮಾ ಮತ್ತು ನಾಗಾಸಾಕಿ ಮೇಲೆ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 14. | ಪಾಕಿಸ್ತಾನವು ಭಾರತದೊಂದಿಗೆ ಸೌಹಾರ್ದಯುತ ಸಂಬಂಧವನ್ನು ಹೊಂದಲು ವಿಫಲವಾಗಿದೆ. ಏಕೆ ?<br>***ಉತ್ತರ :***<br>i) ಮಿಲಿಟರಿ ಸರ್ವಾಧಿಕಾರ<br>ii) ರಾಜಕೀಯ ಅಸ್ಥಿರತೆ<br>iii) ಕಾಶ್ಮೀರ ಸಮಸ್ಯೆ<br>iv) ಭಯೋತ್ಪಾದನೆ<br>v) ಗಡಿವಿವಾದ<br>vi) ಜಲವಿವಾದ | 1 |
| 15. | ಯುನಿಸೆಫ್ ಮಕ್ಕಳ ಅಭಿವೃದ್ಧಿಗೆ ಹೇಗೆ ಶ್ರಮಿಸುತ್ತಿದೆ ?<br>***ಉತ್ತರ :***<br>i) ಶುಭಾಷಯ ಪತ್ರಗಳ ಮಾರಾಟದಿಂದ ಗಳಿಸಿದ ಹಣ ಮಕ್ಕಳ ಯೋಗಕ್ಷೇಮಕ್ಕೆ ಬಳಕೆ<br>ii) ಮಹಿಳೆಯರ ಮಕ್ಕಳ ಅಭಿವೃದ್ಧಿಗೆ ಪೂರಕ ಪರಿಸರ ಒದಗಿಸುತ್ತದೆ.<br>(ಯಾವುದಾದರೂ ಒಂದು) | 1 |
| 16. | ಸಮಾನ ವೇತನ ಕಾಯ್ದೆಯನ್ನು ಯಾವಾಗ ಜಾರಿಗೆ ತರಲಾಯಿತು ?<br>***ಉತ್ತರ :***<br>1976 | 1 |
| 17. | ಹೆಣ್ಣು ಭ್ರೂಣ ಹತ್ಯೆಯಿಂದಾಗುವ ಪರಿಣಾಮವೇನು ?<br>***ಉತ್ತರ :***<br>i) ಲಿಂಗಾನುಪಾತದಲ್ಲಿ ಏರು–ಪೇರು<br>ii) ಲಿಂಗ ತಾರತಮ್ಯ<br>iii) ಹೆಣ್ಣಿನ ಸ್ಥಾನಮಾನದಲ್ಲಿ ಅಪಮೌಲ್ಯೀಕರಣ (ಯಾವುದಾದರೂ ಒಂದು) | 1 |
| 18. | ಗಂಗಾನದಿ ಮುಖಜ ಭೂಮಿಯ ಮ್ಯಾಂಗ್ರೋವ್ ಅರಣ್ಯಗಳನ್ನು ಸುಂದರ್‌ಬನ್ ಎಂದು ಕರೆಯಲು ಕಾರಣವೇನು ?<br>***ಉತ್ತರ :***<br>ಸುಂದರಿ ಮರಗಳು ಹೇರಳವಾಗಿವೆ. | 1 |
| 19. | 'ಭಾರತದ ಸಿಲಿಕಾನ್ ಸಿಟಿ' ಎಂದು ಬೆಂಗಳೂರನ್ನು ಏಕೆ ಕರೆಯುತ್ತಾರೆ ?<br>***ಉತ್ತರ :***<br>ಬೆಂಗಳೂರು ಮಾಹಿತಿ ತಂತ್ರಜ್ಞಾನದ ಮುಖ್ಯ ಕೇಂದ್ರವಾಗಿದೆ. | 1 |
| 20. | ಪ್ರಪಂಚದಲ್ಲಿ ಮೊಟ್ಟಮೊದಲ ಬಾರಿಗೆ ಭೌಗೋಳಿಕ ಮಾಹಿತಿ ವ್ಯವಸ್ಥೆಯ ಬಳಕೆಯನ್ನು ಎಲ್ಲಿ ಪ್ರಾರಂಭಿಸಲಾಯಿತು ?<br>***ಉತ್ತರ :***<br>ಕೆನಡಾ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ಮುಂಬೈಯನ್ನು ಭಾರತದ ಮ್ಯಾಂಚೆಸ್ಟರ್ ಎಂದು ಕರೆಯಲಾಗುತ್ತಿತ್ತು. ಏಕೆ ?<br>***ಉತ್ತರ :***<br>ಅತೀ ಹೆಚ್ಚು ಹತ್ತಿ ಗಿರಣಿಗಳಿದ್ದವು | 1 |
| 22. | ಸರ್ ಎಂ. ವಿಶ್ವೇಶ್ವರಯ್ಯನವರನ್ನು 'ಭಾರತದ ಆರ್ಥಿಕ ಯೋಜನೆಯ ಪಿತಾಮಹ' ಎಂದು ಕರೆಯುತ್ತಾರೆ. ಏಕೆ ?<br>***ಉತ್ತರ :***<br>i) ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಆಧುನಿಕ ಯೋಜನೆಯ ಬಗ್ಗೆ ಚಿಂತನೆ<br>ii) ಭಾರತದ ಆರ್ಥಿಕ ಅಭಿವೃದ್ಧಿಗೆ ಯೋಜನೆಯ ಅಗತ್ಯ (ಯಾವುದಾದರೂ ಒಂದು) | 1 |
| 23. | ಮುಂಗಡ ಪತ್ರ ಎಂದರೇನು ?<br>***ಉತ್ತರ :***<br>ಸರ್ಕಾರದ ಒಂದು ವರ್ಷದ ಆದಾಯ, ವೆಚ್ಚಗಳನ್ನು ಕುರಿತು ತಯಾರಿಸಿದ ಅಂದಾಜು ಪಟ್ಟಿ. | 1 |
| 24. | ಫ್ರೆಂಚ್ ಭಾಷೆಯ ಬ್ಯಾಂಕ್ ( Banque ) ಪದದ ಅರ್ಥವೇನು ?<br>***ಉತ್ತರ :***<br>i) ಬೆಂಚು<br>ii) ಹಣವನ್ನು ವಿನಿಮಯ ಮಾಡಿಕೊಳ್ಳುವ ಟೇಬಲ್ (ಯಾವುದಾದರೂ ಒಂದು) | 1 |
| III. | **ಎರಡು ವಾಕ್ಯಗಳಲ್ಲಿ ಉತ್ತರಿಸುವುದು :** $25 \times 2 = 50$ | |
| 25. | '18ನೇ ಶತಮಾನದ ಮೊದಲಾರ್ಧವು, ಮೊಘಲ್ ಸಾಮ್ರಾಜ್ಯದ ಮಹಾಪತನದ ಕಾಲವಾಗಿತ್ತು.' ಸಮರ್ಥಿಸಿ.<br>***ಉತ್ತರ :***<br>i) ದೇಶೀಯ ಸಂಸ್ಥಾನ, ಪಾಳೇಗಾರರ ಉದಯ<br>ii) ಮಹಾಸಂಸ್ಥಾನಗಳು ಸ್ವತಂತ್ರ (ಬಂಗಾಳ, ಔಧ್, ಹೈದರಾಬಾದ್, ಮರಾಠ)<br>iii) ಬ್ರಿಟಿಷ್ ಸೈನ್ಯದ ಬೆಂಬಲ – ಸಣ್ಣಪುಟ್ಟ ಅರಸರಿಗೆ<br>iv) ದುರ್ಬಲ ಹಾಗೂ ಅದಕ್ಷ ಔರಂಗಜೇಬನ ಉತ್ತರಾಧಿಕಾರಿಗಳು<br>v) ಯುರೋಪಿಯನ್ನರ ಆಗಮನ (ಯಾವುದಾದರೂ ಎರಡು) | 2 |
| 26. | 'ಮದ್ರಾಸ್ ಶಾಂತಿ ಒಪ್ಪಂದ'ವು ಬ್ರಿಟಿಷರಿಗೆ ಅನಿವಾರ್ಯವಾಗಿತ್ತು. ಏಕೆ ?<br>***ಉತ್ತರ :***<br>i) ಬ್ರಿಟಿಷ್, ಹೈದರಾಬಾದ್ ನಿಜಾಮ, ಮರಾಠರ ಒಕ್ಕೂಟ<br>ii) ಹೈದರ್‌ನ ಮೇಲೆ ದಾಳಿ<br>iii) ನಿಜಾಮ, ಮರಾಠರ ಬೆಂಬಲ ಗಳಿಸಿದ ಹೈದರ್ ಆಲಿ<br>iv) ಬ್ರಿಟಿಷ್‌ರನ್ನು ಎದುರಿಸುತ್ತಾ ಮದ್ರಾಸ್ ತಲುಪಿದ ಹೈದರ್ ಆಲಿ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 27. | ಭಾರತ ಇತಿಹಾಸದಲ್ಲಿ 19ನೇ ಶತಮಾನವನ್ನು 'ಭಾರತೀಯ ನವೋದಯ ಕಾಲ'ವೆಂದು ಕರೆಯಲಾಗಿದೆ. ಏಕೆ ?<br>***ಉತ್ತರ :***<br>i) ಪಾಶ್ಚಿಮಾತ್ಯ ನಾಗರಿಕತೆಯ ಸಂಪರ್ಕ<br>ii) ವೈಚಾರಿಕತೆಯ ಮನೋಭಾವ<br>iii) ಮೂಢನಂಬಿಕೆಗಳನ್ನು ಪ್ರಶ್ನಿಸಲು ಪ್ರೇರಣೆ<br>iv) ದ್ವಂದ್ವತೆ, ವಿರೋಧಾಭಾಸ ಹಾಗೂ ಸ್ವಹಿತಾಸಕ್ತಿಗಳ ಅರಿವು<br>v) ಪ್ರಜಾಪ್ರಭುತ್ವದ ಕಲ್ಪನೆ<br>vi) ರಾಷ್ಟ್ರೀಯತೆಯ ಕಲ್ಪನೆ<br>vii) ಸ್ವಾತಂತ್ರ್ಯ, ಸಮಾನತೆಯ ಕಲ್ಪನೆ<br>viii) ಸಮಾಜ ಸುಧಾರಣಾ ಸಂಸ್ಥೆಗಳ ಉಗಮ (ಯಾವುದಾದರೂ ನಾಲ್ಕು) 4 × ½ | 2 |
| 28. | ಜುನಾಗಢ್ ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಹೇಗೆ ಸೇರ್ಪಡೆಗೊಳಿಸಲಾಯಿತು ?<br>***ಅಥವಾ***<br>ಗೋವಾವನ್ನು ಪೋರ್ಚುಗೀಸರಿಂದ ಹೇಗೆ ವಿಮೋಚನೆಗೊಳಿಸಲಾಯಿತು ?<br>***ಉತ್ತರ :***<br>i) ಪಾಕಿಸ್ತಾನ ಸೇರುವ ನವಾಬನ ಇಚ್ಛೆ<br>ii) ಪ್ರಜೆಗಳ ಹೋರಾಟ – ನವಾಬನ ಪಲಾಯನ<br>iii) ಭಾರತ ಸರ್ಕಾರಕ್ಕೆ ದಿವಾನರ ಮನವಿ<br>iv) ಸೈನ್ಯ ಮಧ್ಯ ಪ್ರವೇಶ<br>v) ಸಾರ್ವಜನಿಕ ಅಭಿಪ್ರಾಯ (ಯಾವುದಾದರೂ ನಾಲ್ಕು) 4 × ½ | 2 |
| | ***ಅಥವಾ***<br>i) ನಿರಂತರ ಚಳುವಳಿ<br>ii) ಚಳುವಳಿ ದಮನ (ಆಫ್ರಿಕಾ, ಯುರೋಪಿನ ಸೈನ್ಯ ಆಗಮನ)<br>iii) ಸತ್ಯಾಗ್ರಹಿಗಳಿಂದ ಗೋವಾ ವಿಮೋಚನಾ ಹೋರಾಟ<br>iv) ಸೈನ್ಯ ಪ್ರವೇಶ – ಗೋವಾ ವಶ (ಯಾವುದಾದರೂ ನಾಲ್ಕು) 4 × ½ | 2 |
| 29. | ಭಾರತದಲ್ಲಿ ಪ್ರಾದೇಶಿಕವಾದವು ಸಹಜವಾಗಿ ಬೆಳೆಯಲು ಕಾರಣವಾಗುವ ಅಂಶಗಳಾವುವು ?<br>***ಉತ್ತರ :***<br>i) ಆಯಾ ಪ್ರದೇಶಗಳ ಚಾರಿತ್ರಿಕ ಹಿನ್ನೆಲೆ<br>ii) ಸಾಮಾಜಿಕ ಕಟ್ಟುಪಾಡುಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
| --- | --- | --- |
| | iii) ಆರ್ಥಿಕ ವಿಚಾರಗಳು<br>iv) ಸಾಂಸ್ಕೃತಿಕ ಭಿನ್ನತೆಗಳು<br>v) ಭೌಗೋಳಿಕ ಪರಿಸರ<br>vi) ಭಾಷಾಭಿಮಾನ (ಯಾವುದಾದರೂ ನಾಲ್ಕು) 4 × ½ | 2 |
| 30. | ಪ್ರಪಂಚದಲ್ಲಿ ಭಾರತವು ಒಂದು ಪ್ರಭಾವಶಾಲಿ ರಾಷ್ಟ್ರವಾಗಿದೆ. ಹೇಗೆ ?<br>***ಉತ್ತರ :***<br>i) ಹೇರಳ ಮಾನವ ಸಂಪತ್ತು (ಜನಸಂಖ್ಯೆ)<br>ii) ಅಪಾರ ಪ್ರಾಕೃತಿಕ ಸಂಪತ್ತು<br>iii) ಪರಿಣಿತ ಬೌದ್ಧಿಕ ಸಾಮರ್ಥ್ಯ<br>iv) ಔದ್ಯೋಗಿಕ ಸಾಮರ್ಥ್ಯ<br>v) ಬಲಾಢ್ಯ ಸೈನಿಕ ಬಲ<br>vi) ವಿಶಿಷ್ಟ ಸಂಸ್ಕೃತಿ<br>vii) ತಾಂತ್ರಿಕ ಸಾಮರ್ಥ್ಯ<br>viii) ಶಾಂತಿಪ್ರಿಯ ರಾಷ್ಟ್ರ (ಯಾವುದಾದರೂ ನಾಲ್ಕು) 4 × ½ | 2 |
| 31. | 'ಭಾರತದಲ್ಲಿ ಅಸ್ಪೃಶ್ಯತಾ ಆಚರಣೆಯು ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುತ್ತಿದೆ.' ಸಮರ್ಥಿಸಿ.<br>***ಉತ್ತರ :***<br>i) ಸಾಕ್ಷರತೆ<br>ii) ಎಲ್ಲಾ ಜಾತಿ, ವರ್ಗದವರಿಗೂ ಸಂವಿಧಾನಾತ್ಮಕ ಸೌಲಭ್ಯಗಳು<br>iii) ಹಿಂದುಳಿದ ಜಾತಿ, ವರ್ಗದವರಿಗೆ ವಿಶೇಷ ಸೌಲಭ್ಯಗಳು<br>iv) ಸಾಮಾಜಿಕ ಜಾಗೃತಿ<br>v) ಸಾರಿಗೆ – ಸಂಪರ್ಕ<br>vi) ಅಸ್ಪೃಶ್ಯತಾ ಆಚರಣೆಯ ನಿಷೇಧ – 17ನೇ ವಿಧಿ<br>vii) ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ – 1955<br>viii) ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ – 1976<br>ix) ಸಮಾನತೆಯ ಹಕ್ಕುಗಳು<br>x) ಸಮೂಹ ಮಾಧ್ಯಮಗಳ ಪಾತ್ರ<br>xi) ನಗರೀಕರಣ<br>xii) ಅಂತರ್‌ಜಾತಿ ವಿವಾಹಗಳು (ಯಾವುದಾದರೂ ನಾಲ್ಕು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 32. | ಪಶ್ಚಿಮ ಕರಾವಳಿ ಮೈದಾನಗಳು ಪೂರ್ವ ಕರಾವಳಿ ಮೈದಾನಗಳಿಗಿಂತ ಹೇಗೆ ಭಿನ್ನವಾಗಿವೆ ? | |
| | ***ಉತ್ತರ :*** | |

| ಪಶ್ಚಿಮ ಕರಾವಳಿ ಮೈದಾನ | ಪೂರ್ವ ಕರಾವಳಿ ಮೈದಾನ |
|---|---|
| i) ಕಛ್‌ನಿಂದ ಕನ್ಯಾಕುಮಾರಿವರೆಗೆ | i) ಕನ್ಯಾಕುಮಾರಿಯಿಂದ ಗಂಗಾನದಿ ಮುಖಜಭೂಮಿಯವರೆಗೆ |
| ii) ಪಶ್ಚಿಮ ಘಟ್ಟ ಮತ್ತು ಅರಬ್ಬೀ ಸಮುದ್ರಗಳ ನಡುವೆ ಹರಡಿದೆ | ii) ಪೂರ್ವ ಘಟ್ಟಗಳು ಮತ್ತು ಬಂಗಾಳ ಕೊಲ್ಲಿಯ ನಡುವೆ ಹರಡಿದೆ |
| iii) ಮಲಬಾರ್ ತೀರ, ಕೆನರಾ (ಕರ್ನಾಟಕ) ತೀರ, ಕೊಂಕಣ ತೀರ, ಗುಜರಾತ್ ತೀರ | iii) ಉತ್ಕಲ ತೀರ, ಕೋರಮಂಡಲ ತೀರ |
| iv) ಮುಂಬೈ, ಮರ್ಮಗೋವಾ, ಕೊಚ್ಚಿನ್, ಕಾಂಡ್ಲ, ಕಾರವಾರ, ಮಂಗಳೂರು – ಬಂದರುಗಳು | iv) ತೂತುಕುಡಿ, ಚೆನ್ನೈ, ವಿಶಾಖಪಟ್ಟಣ, ಪಾರಾದೀಪ್, ಕೋಲ್ಕತ್ತಾ, ಹಾಲ್ಡಿಯಾ ಬಂದರುಗಳು |
| v) ಕಿರಿದಾದ ಮೈದಾನ | v) ಅಗಲ, ಸಮತಟ್ಟಾದ ಮೈದಾನ |
| vi) ಹಿನ್ನೀರ ಕಾಲುವೆಗಳಿವೆ | vi) ಉಪ್ಪು ನೀರಿನ ಸರೋವರ (ಲಗೂನ್)ಗಳಿವೆ |
| vii) ಅಳಿವೆಗಳಿವೆ | vii) ನದಿ ಮುಖಜ ಭೂಮಿಗಳಿವೆ |

(ಯಾವುದಾದರೂ ಎರಡು ವ್ಯತ್ಯಾಸಗಳು) — 2

33. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ತಿಳಿಸಿ.

***ಉತ್ತರ :***

i) ಅಕ್ಷಾಂಶ

ii) ಸಮುದ್ರ ಮಟ್ಟದಿಂದ ಇರುವ ಎತ್ತರ

iii) ಸಾಗರಗಳಿಂದ ಇರುವ ದೂರ

iv) ಮಾರುತಗಳ ದಿಕ್ಕು

v) ಪರ್ವತ ಸರಣಿಗಳು ಹಬ್ಬಿರುವ ರೀತಿ

vi) ಸಾಗರ ಪ್ರವಾಹಗಳು

vii) ಸ್ಥಾನ

viii) ಆಕಾರ

ix) ಮಾನ್ಸೂನ್ ಮಾರುತಗಳು

(ಯಾವುದಾದರೂ ನಾಲ್ಕು) 4 × ½ — 2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 34. | ಮಣ್ಣಿನ ಸವತಕ್ಕೆ ಕಾರಣವಾಗುವ ಅಂಶಗಳನ್ನು ಪಟ್ಟಿಮಾಡಿ.<br>*ಉತ್ತರ :*<br>i) ಅರಣ್ಯಗಳ ನಾಶ<br>ii) ಸಾಕು ಪ್ರಾಣಿಗಳನ್ನು ಅತಿಯಾಗಿ ಮೇಯಿಸುವುದು<br>iii) ಅವೈಜ್ಞಾನಿಕ ಬೇಸಾಯ<br>iv) ಅಧಿಕ ನೀರಾವರಿ ಬಳಕೆ<br>v) ಪ್ರವಾಹಗಳು<br>vi) ಅತಿಯಾದ ಮಳೆ (ಯಾವುದಾದರೂ ನಾಲ್ಕು) 4 × ½ | 2 |
| 35. | 'ಭಾರತದ ಕೃಷಿಯು ದ್ವಿತೀಯ ಹಾಗೂ ತೃತೀಯ ರಂಗದ ಉದ್ಯೋಗಗಳನ್ನು ಪೋಷಿಸುತ್ತಿದೆ.' ಸಮರ್ಥಿಸಿ.<br>*ಉತ್ತರ :*<br>*ದ್ವಿತೀಯ ರಂಗ :*<br>i) ಕೃಷಿ ಆಧಾರಿತ ಕೈಗಾರಿಕೆಗಳು (ಸಕ್ಕರೆ, ಹತ್ತಿ, ಸೆಣಬು)<br>ii) ರಾಸಾಯನಿಕ ಗೊಬ್ಬರ ಕಾರ್ಖಾನೆ (ಮಾರುಕಟ್ಟೆ ಒದಗಿಸುತ್ತದೆ)<br>iii) ಕ್ರಿಮಿನಾಶಕ, ಕೀಟನಾಶಕ ಕಾರ್ಖಾನೆ (ಮಾರುಕಟ್ಟೆ ಒದಗಿಸುತ್ತದೆ)<br>iv) ಕೃಷಿ ಉಪಕರಣಗಳನ್ನು ಉತ್ಪಾದಿಸುವ ಕಾರ್ಖಾನೆಗಳಲ್ಲಿ ಉದ್ಯೋಗಾವಕಾಶ (ಕಾರ್ಖಾನೆಗಳಲ್ಲಿ ಉದ್ಯೋಗಾವಕಾಶಗಳು) 1<br>*ತೃತೀಯ ರಂಗ :*<br>i) ಸಾರಿಗೆ<br>ii) ಬ್ಯಾಂಕಿಂಗ್<br>iii) ವಿಮೆ<br>iv) ಶಿಕ್ಷಣ<br>v) ವ್ಯಾಪಾರ (ಸೇವಾವಲಯದಲ್ಲಿ ಉದ್ಯೋಗಾವಕಾಶಗಳು) 1<br>ಕೃಷಿಯಿಂದಾಗಿ ಇವುಗಳ ಬೆಳವಣಿಗೆ | 2 |
| 36. | ಭೂಕುಸಿತದ ಪರಿಣಾಗಳಾವುವು ?<br>*ಉತ್ತರ :*<br>i) ಚಿಕ್ಕ ನದಿಗಳು ಹರಿಯುವುದಕ್ಕೆ ಅಡ್ಡಿ<br>ii) ಸಂಚಾರಕ್ಕೆ ಅಡ್ಡಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | iii) ಹಳ್ಳಿ (ಜನವಸತಿ ಪ್ರದೇಶಗಳು) ಮುಳುಗಡೆ | |
| | iv) ಅರಣ್ಯಗಳು ಭೂಗತ | |
| | v) ಜೀವ ಹಾನಿ | |
| | vi) ಆಸ್ತಿ ಹಾನಿ (ಯಾವುದಾದರೂ ನಾಲ್ಕು) 4 × ½ | 2 |
| 37. | 'ಜನಸಂಖ್ಯಾ ಸ್ಫೋಟವು ಹಲವು ಸಮಸ್ಯೆಗಳಿಗೆ ಮೂಲವಾಗಿದೆ.' ಈ ಹೇಳಿಕೆಯನ್ನು ಸಮರ್ಥಿಸಿ. | |
| | ***ಉತ್ತರ :*** | |
| | i) ನಿರುದ್ಯೋಗ | |
| | ii) ಆಹಾರ ಕೊರತೆ | |
| | iii) ಪೌಷ್ಠಿಕಾಂಶದ ಕೊರತೆ | |
| | iv) ನಾಗರಿಕ ಸೌಲಭ್ಯಗಳ ಕೊರತೆ | |
| | v) ತಲಾ ಆದಾಯದಲ್ಲಿ ಇಳಿಮುಖ | |
| | vi) ರಾಷ್ಟ್ರೀಯ ಆದಾಯದಲಿ ಇಳಿಮುಖ | |
| | vii) ನಿಧಾನಗತಿಯ ಆರ್ಥಿಕ ಅಭಿವೃದ್ಧಿ | |
| | viii) ರಾಜಕೀಯ ಕ್ಷೋಭೆ | |
| | ix) ಸಾಮಾಜಿಕ ಸಮಸ್ಯೆಗಳು (ಭಿಕ್ಷಾಟನೆ, ವೇಶ್ಯಾವೃತ್ತಿ) | |
| | x) ನಗರಗಳಲ್ಲಿ ಕೊಳಚೆ ಪ್ರದೇಶಗಳ ನಿರ್ಮಾಣ | |
| | xi) ಅಪರಾಧಗಳ ಹೆಚ್ಚಳ | |
| | xii) ಅನಕ್ಷರತೆ | |
| | xiii) ಬಡತನ (ಯಾವುದಾದರೂ ನಾಲ್ಕು) 4 × ½ | 2 |
| 38. | ಕೇವಲ ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯಗಳು ದೇಶದ ಅಭಿವೃದ್ಧಿಯ ನೈಜ ಮಾಪಕವಾಗಲಾರವು. ಏಕೆ ? | |
| | ***ಉತ್ತರ :*** | |
| | ***ರಾಷ್ಟ್ರೀಯ ಆದಾಯ :*** | |
| | i) ರಾಷ್ಟ್ರೀಯ ಆದಾಯ ಹೆಚ್ಚಾದಂತೆ ಜನಸಂಖ್ಯೆಯಲ್ಲಿ ಹೆಚ್ಚಳ – ಆರ್ಥಿಕ ಅಭಿವೃದ್ಧಿ ಅಸಾಧ್ಯ | |
| | ii) ಬೇರೆಬೇರೆ ಪ್ರಮಾಣದ ಜನಸಂಖ್ಯೆ ಹೊಂದಿರುವ ದೇಶಗಳ ಅಭಿವೃದ್ಧಿಯನ್ನು ಇದರಿಂದ ಅಳೆಯುವುದು ಅಸಮಂಜಸ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ತಲಾ ಆದಾಯ :*** | |
| | i) ಆದಾಯವು ಜನರ ನಡುವೆ ಹೇಗೆ ಹಂಚಿಕೆಯಾಗಿದೆ ಎಂದು ತಿಳಿಸುವುದಿಲ್ಲ | |
| | ii) ಶಿಕ್ಷಣ, ಆರೋಗ್ಯ ಮುಂತಾದ ಸಾಮಾಜಿಕ ಅಂಶಗಳನ್ನು ಪರಿಗಣಿಸುವುದಿಲ್ಲ (ಪ್ರತಿಯೊಂದರಲ್ಲೂ ಕನಿಷ್ಠ ಒಂದು) | 2 |
| 39. | ಜಾಗತೀಕರಣವು ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತಿದೆ. ಹೇಗೆ ? | |
| | ***ಉತ್ತರ :*** | |
| | i) ವಿಶಾಲವಾದ ಹೆಚ್ಚಿನ ಸರಕು ಸೇವೆಗಳ ಉತ್ಪಾದನೆ | |
| | ii) ಜನರ ಜೀವನಮಟ್ಟದಲ್ಲಿ ಹೆಚ್ಚಳ | |
| | iii) ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ | |
| | iv) ತಲಾ ಆದಾಯದಲ್ಲಿ ಹೆಚ್ಚಳ | |
| | v) ದೇಶದ ರಾಷ್ಟ್ರೀಯ ಉತ್ಪನ್ನ ( GDP ) ದಲ್ಲಿ ಹೆಚ್ಚಳ (ಯಾವುದಾದರೂ ಎರಡು) | 2 |
| 40. | ಸಮುದ್ರಯಾನದಲ್ಲಿ ನಾವಿಕರಿಗೆ ಸಹಾಯಕವಾದ ಹೊಸ ವೈಜ್ಞಾನಿಕ ಸಲಕರಣೆಗಳಾವುವು ? | |
| | ***ಉತ್ತರ :*** | |
| | i) ದಿಕ್ಸೂಚಿ | |
| | ii) ಸಿಡಿಮದ್ದು | |
| | iii) ನೌಕಾ ಉಪಕರಣಗಳು | |
| | iv) ಭೂಪಟ | 2 |
| 41. | ಹೈದರಾಬಾದ್–ಕರ್ನಾಟಕದ ಪ್ರದೇಶಗಳನ್ನು ಹೆಸರಿಸಿ. | |
| | ***ಉತ್ತರ :*** | |
| | i) ಬೀದರ್ | |
| | ii) ಕಲಬುರಗಿ | |
| | iii) ಯಾದಗಿರಿ | |
| | iv) ಕೊಪ್ಪಳ | |
| | v) ಬಳ್ಳಾರಿ | |
| | vi) ರಾಯಚೂರು (ಯಾವುದಾದರೂ ನಾಲ್ಕು) $4 \times \frac{1}{2}$ | 2 |
| 42. | ಕೋಮುವಾದದ ಪರಿಣಾಮಗಳನ್ನು ತಿಳಿಸಿ. | |
| | ***ಉತ್ತರ :*** | |
| | i) ಪರಸ್ಪರ ಅಪನಂಬಿಕೆ | |
| | ii) ಭಯದ ವಾತಾವರಣ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | iii) ರಾಷ್ಟ್ರೀಯ ಏಕತೆಗೆ ಭಂಗ<br>iv) ಸಮಗ್ರತೆಗೆ ಭಂಗ<br>v) ಜೀವ ಹಾನಿ<br>vi) ಸ್ವತ್ತುಗಳ ಹಾನಿ<br>vii) ಸಾಮಾಜಿಕ ಅಶಾಂತಿ<br>viii) ಮತೀಯ ಗುಂಪುಗಳ ಮಧ್ಯೆ ದೋಷಾರೋಪಣೆ<br>ix) ದೈಹಿಕ ಹಲ್ಲೆ (ಯಾವುದಾದರೂ ನಾಲ್ಕು) 4 × ½ | 2 |
| 43. | ವಿಶ್ವಸಂಸ್ಥೆಯ ಪ್ರಧಾನ ಅಂಗ ಸಂಸ್ಥೆಗಳಾವುವು ?<br>***ಉತ್ತರ :***<br>i) ಸಾಮಾನ್ಯ ಸಭೆ<br>ii) ಭದ್ರತಾ ಸಮಿತಿ<br>iii) ಆರ್ಥಿಕ ಹಾಗೂ ಸಾಮಾಜಿಕ ಸಮಿತಿ<br>iv) ದತ್ತಿ ಸಮಿತಿ<br>v) ಅಂತರ್‌ರಾಷ್ಟ್ರೀಯ ನ್ಯಾಯಾಲಯ<br>vi) ಸಚಿವಾಲಯ (ಯಾವುದಾದರೂ ನಾಲ್ಕು) 4 × ½ | 2 |
| 44. | ಬಾಲಕಾರ್ಮಿಕರ ಸಮಸ್ಯೆಗೆ ಕಾರಣಗಳಾವುವು ?<br>***ಉತ್ತರ :***<br>i) ಬಡತನ<br>ii) ಕೌಟುಂಬಿಕ ಕಲಹ<br>iii) ವಿಚ್ಛೇದನ<br>iv) ಕೌಟುಂಬಿಕ ಹಿಂಸೆ<br>v) ಪೋಷಕರ ಅತಿಯಾದ ನಿಯಂತ್ರಣ<br>vi) ಉದ್ಯಮಿಗಳ ಲಾಭಕೋರತನ<br>vii) ಅನಕ್ಷರತೆ<br>viii) ಮಕ್ಕಳ ಅಪಹರಣ<br>ix) ಮಕ್ಕಳ ಜೀತ (ಯಾವುದಾದರೂ ನಾಲ್ಕು) 4 × ½ | 2 |
| 45. | ಭಾರತದಲ್ಲಿ ಕಂಡುಬರುವ ಮಣ್ಣಿನ ಮುಖ್ಯ ಪ್ರಕಾರಗಳಾವುವು ?<br>***ಉತ್ತರ :***<br>i) ಮೆಕ್ಕಲು ಮಣ್ಣು<br>ii) ಕಪ್ಪು ಮಣ್ಣು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | iii) ಕೆಂಪು ಮಣ್ಣು<br>iv) ಜಂಬಿಟ್ಟಿಗೆ (ಲ್ಯಾಟರೈಟ್) ಮಣ್ಣು<br>v) ಮರುಭೂಮಿ ಮಣ್ಣು<br>vi) ಪರ್ವತದ ಮಣ್ಣು (ಯಾವುದಾದರೂ ನಾಲ್ಕು) | 2 |
| 46. | ಭಾರತದಲ್ಲಿ ಬೆಳೆಯುವ ಹೂವುಗಳನ್ನು ಹೆಸರಿಸಿ.<br>***ಉತ್ತರ :***<br>i) ಮಲ್ಲಿಗೆ<br>ii) ದುಂಡು ಮಲ್ಲಿಗೆ<br>iii) ಸಂಪಿಗೆ<br>iv) ಚೆಂಡು ಹೂವು<br>v) ಸೇವಂತಿಗೆ<br>vi) ಕನಕಾಂಬರ<br>vii) ಗುಲಾಬಿ<br>viii) ಲಿಲ್ಲಿ (ಯಾವುದಾದರೂ ನಾಲ್ಕು) 4 × ½ | 2 |
| 47. | ನೀರಾವರಿಯ ವಿಧಗಳಾವುವು ?<br>***ಉತ್ತರ :***<br>i) ಬಾವಿ ನೀರಾವರಿ<br>ii) ಕಾಲುವೆ ನೀರಾವರಿ<br>iii) ಕೆರೆ ನೀರಾವರಿ (ಯಾವುದಾದರೂ ಎರಡು) | 2 |
| 48. | ಅನಭಿವೃದ್ಧಿ ದೇಶಗಳ ಲಕ್ಷಣಗಳಾವುವು ?<br>***ಉತ್ತರ :***<br>i) ಕಡಿಮೆ ತಲಾ ಆದಾಯ<br>ii) ಕಡಿಮೆ ರಾಷ್ಟ್ರೀಯ ಆದಾಯ<br>iii) ಬಡತನ<br>iv) ಅನಕ್ಷರತೆ<br>v) ಮೂಲಭೂತ ಅವಶ್ಯಕತೆಗಳ ಕೊರತೆ<br>vi) ಮೂಢನಂಬಿಕೆಗಳು<br>vii) ಅನಾರೋಗ್ಯ<br>viii) ನಾಗರಿಕ ಸೌಲಭ್ಯಗಳ ಕೊರತೆ<br>ix) ವೈದ್ಯಕೀಯ ಸೌಲಭ್ಯಗಳು (ಯಾವುದಾದರೂ ನಾಲ್ಕು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 49. | ಬ್ಯಾಂಕ್ ಖಾತೆಯ ವಿಧಗಳಾವುವು ?<br>***ಉತ್ತರ :***<br>i) ಉಳಿತಾಯ ಖಾತೆ<br>ii) ಚಾಲ್ತಿ ಖಾತೆ<br>iii) ಆವರ್ತ ಠೇವಣಿ ಖಾತೆ<br>iv) ನಿಶ್ಚಿತ ಠೇವಣಿ ಖಾತೆ 4 × ½ | 2 |
| IV. | **ಆರು ವಾಕ್ಯಗಳಲ್ಲಿ ಉತ್ತರಿಸುವುದು :** 6 × 3 = 18 | |
| 50. | 1857 ರ ದಂಗೆಯ ವಿಫಲತೆಗೆ ಕಾರಣವಾದ ಅಂಶಗಳನ್ನು ವಿವರಿಸಿ.<br>***ಅಥವಾ***<br>ಶಿಕ್ಷಣ ಹಾಗೂ ಪತ್ರಿಕೋದ್ಯಮದ ಬೆಳವಣಿಗೆಯು ಭಾರತದ ಸ್ವಾತಂತ್ರ್ಯ ಚಳುವಳಿಗೆ ನಾಂದಿಯಾಯಿತು. ವಿವರಿಸಿ.<br>***ಉತ್ತರ :***<br>i) ಇಡೀ ಭಾರತವನ್ನು ವ್ಯಾಪಿಸಿರಲಿಲ್ಲ<br>ii) ಸ್ವಹಿತಾಸಕ್ತಿ ಹಾಗೂ ಹಕ್ಕುಗಳಿಗಾಗಿ ನಡೆದ ದಂಗೆ<br>iii) ಯೋಜಿತ ದಂಗೆಯಾಗಿರಲಿಲ್ಲ<br>iv) ಅನಿರೀಕ್ಷಿತ ಕಾರಣಗಳಿಂದ ಪ್ರೇರಿತವಾಗಿತ್ತು<br>v) ಬ್ರಿಟಿಷ್ ಸೈನಿಕರ ಒಗ್ಗಟ್ಟು<br>vi) ಭಾರತೀಯ ಸೈನಿಕರಲ್ಲಿನ ಭಿನ್ನತೆ<br>vii) ಸೂಕ್ತ ಮಾರ್ಗದರ್ಶನದ ಕೊರತೆ<br>viii) ವ್ಯವಸ್ಥಿತ ಸಂಘಟನೆಯ ಕೊರತೆ<br>ix) ಸೂಕ್ತ ನಾಯಕತ್ವದ ಕೊರತೆ<br>x) ತಂತ್ರ, ಪರಿಣತಿ, ಶಿಸ್ತಿನ ಕೊರತೆ<br>xi) ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ<br>xii) ದೇಶೀಯ ದೊರೆಗಳ ಬ್ರಿಟಿಷ್ ನಿಷ್ಠೆ<br>xiii) ಲೂಟಿ, ದರೋಡೆ ಮಾಡಿ ಜನರ ವಿಶ್ವಾಸ ಕಳೆದುಕೊಂಡದ್ದು<br>(ಯಾವುದಾದರೂ ಆರು) 6 × ½<br>***ಅಥವಾ*** | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಶಿಕ್ಷಣ :*<br>i) ಪಾಶ್ಚಾತ್ಯ ವಿಚಾರ ಧಾರೆಗಳು – ರಾಷ್ಟ್ರೀಯ ಜಾಗೃತಿ<br>ii) ನಾಯಕತ್ವದ ಬೆಳವಣಿಗೆ<br>iii) ಏಕತೆಗೆ ಸಹಕಾರಿಯಾದ ಆಂಗ್ಲ ಭಾಷೆ<br>iv) ಪ್ರಾಂತೀಯ ಸಾಹಿತ್ಯ ಬೆಳವಣಿಗೆ<br>*ಪತ್ರಿಕೋದ್ಯಮ :*<br>i) ಪತ್ರಿಕೋದ್ಯಮದ ಉಗಮ – ಸ್ವಾತಂತ್ರ್ಯ ಹೋರಾಟದ ಚರಿತ್ರೆಯ ಬೆಸುಗೆ<br>ii) ನವಜಾಗೃತಿಗೆ ಕಾರಣ<br>iii) ಸರ್ಕಾರದ ಕಾರ್ಯವೈಖರಿಯ ಪ್ರಶ್ನೆ<br>iv) ಜನತೆಯ ಮನೋಭಾವನೆಯ ಪ್ರತಿನಿಧಿ<br>v) ಭಾರತೀಯ ಪ್ರಾತಿನಿಧಿಕ ಧ್ವನಿ<br>vi) ರಾಷ್ಟ್ರೀಯವಾದಿ ಧೋರಣೆ – ಸೋಮ ಪ್ರಕಾಶ, ಅಮೃತ್ ಬಜಾರ್, ದಿ ಬೆಂಗಾಲಿ<br>(ಪ್ರತಿಯೊಂದರಲ್ಲೂ ಕನಿಷ್ಠ ಮೂರು) | 3 |
| 51. | 'ಭಾರತ ಮತ್ತು ಚೀನಾಗಳ ನಡುವಿನ ಸಂಬಂಧವು ನಿರೀಕ್ಷಿತ ಫಲವನ್ನು ನೀಡುವಲ್ಲಿ ವಿಫಲವಾಗಿದೆ.' ಸಮರ್ಥಿಸಿ.<br>***ಅಥವಾ***<br>ಭಯೋತ್ಪಾದನೆಯು ಕಾನೂನುಬಾಹಿರ ಹಾಗೂ ಸಮಾಜದ್ರೋಹಿ ಕೃತ್ಯ. ಸಮರ್ಥಿಸಿ.<br>*ಉತ್ತರ :*<br>i) ಚೀನಾ–ಭಾರತ ಯುದ್ಧ 1962<br>ii) ಅರುಣಾಚಲ ಪ್ರದೇಶದ ಮೇಲೆ ಹಕ್ಕು ಪ್ರತಿಪಾದನೆ<br>iii) ನಕ್ಸಲ್‌ವಾದದ ಹರಡುವಿಕೆ<br>iv) ಟಿಬೇಟ್ ಆಕ್ರಮಣ<br>v) ಗಡಿ ವಿವಾದ<br>vi) ಅಣ್ವಸ್ತ್ರಗಳ ಬೆದರಿಕೆ<br>vii) ವಿದೇಶಿ ವ್ಯಾಪಾರದ ಸವಾಲುಗಳು<br>viii) ಗಡಿಯಲ್ಲಿ ಚೀನಾ ಮಿಲಿಟರಿ ಪಡೆಗಳಿಂದ ಅತಿಕ್ರಮಣ<br>ix) ಜಲ ವಿವಾದ (ಯಾವುದಾದರೂ ಆರು) 6 × ½<br>***ಅಥವಾ*** | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | i) ವ್ಯಕ್ತಿಗಳಿಗೆ ಮತ್ತು ಸ್ವತ್ತುಗಳಿಗೆ ಭಾರಿ ಹಾನಿ<br>ii) ಮಾನಸಿಕ ವೇದನೆ<br>iii) ಸರ್ಕಾರ ಮತ್ತು ಸಮಾಜದ ಮೇಲೆ ನಕಾರಾತ್ಮಕ ಪರಿಣಾಮ<br>iv) ಭಯದ ವಾತಾವರಣ ಸೃಷ್ಟಿ<br>v) ಸರಣಿ ಬಾಂಬ್ ಸ್ಫೋಟಗಳು<br>vi) ಧಾರ್ಮಿಕ ಮೂಲಭೂತವಾದಿ ಚಿಂತನೆ<br>vii) ಪ್ರತ್ಯೇಕತಾವಾದ ಚಿಂತನೆ<br>viii) ವರ್ಣದ್ವೇಷ<br>ix) ಸ್ಫೋಟಕ ಹಾಗೂ ವಿಷಾನಿಲಗಳ ಬಳಕೆ<br>x) ಆತ್ಮಾಹುತಿ ದಾಳಿ<br>xi) ವಿಮಾನ ಅಪಹರಣ<br>xii) ಗುಂಡಿನ ಕಾಳಗ<br>xiii) ನಿರ್ದಿಷ್ಟ ಅಥವಾ ಮುಗ್ಧ ಜನರ ಒತ್ತೆ ಇರಿಸುವಿಕೆ<br>(ಯಾವುದಾದರೂ ಆರು) 6 × ½ | 3 |
| 52. | ನಿರುದ್ಯೋಗವು ಅತ್ಯಂತ ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ. ವಿವರಿಸಿ.<br>***ಅಥವಾ***<br>ಮಹಿಳಾ ಸಬಲೀಕರಣವನ್ನು ಸಾಧಿಸುವಲ್ಲಿ ಮಹಿಳಾ ಸ್ವಸಹಾಯ ಸಮೂಹಗಳ ಪಾತ್ರವನ್ನು ವಿವರಿಸಿ.<br>***ಉತ್ತರ :***<br>i) ಬಡತನ<br>ii) ಅನಾರೋಗ್ಯ<br>iii) ಭ್ರಷ್ಟಾಚಾರ<br>iv) ಕೌಟುಂಬಿಕ ವಿಘಟನೆ<br>v) ಮೋಸ<br>vi) ವಂಚನೆ<br>vii) ಕಳ್ಳತನ<br>viii) ವ್ಯಭಿಚಾರ<br>ಮುಂತಾದ ಪರಿಣಾಗಳಿಗೆ ಕಾರಣವಾಗುವುದು<br>(ಯಾವುದಾದರೂ ಆರು) 6 × ½<br>***ಅಥವಾ*** | 3 |


| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | i) ಭಾರತ ಹಣಕಾಸು ಉದ್ಯಮದ ನವೀನರೂಪ<br>ii) ಕಿರು ಸಾಲಗಳು ದೊಡ್ಡಮಟ್ಟದಲ್ಲಿ<br>iii) ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ಅವಕಾಶ<br>iv) ಶೈಕ್ಷಣಿಕ ಜಾಗೃತಿ<br>v) ಸ್ವಾವಲಂಬಿ ಜೀವನಕ್ಕೆ ಸಹಕಾರಿ<br>vi) ದೌರ್ಜನ್ಯಗಳನ್ನು ಎದುರಿಸಲು ಸಹಾಯಕ<br>vii) ಮಾನವ ಹಕ್ಕುಗಳನ್ನು ಪಡೆಯಲು<br>viii) ಪ್ರಜಾಸತ್ತಾತ್ಮಕ ಹಕ್ಕು, ಅಧಿಕಾರ, ಗೌರವ<br>ix) ಎಲ್ಲಾ ಕ್ಷೇತ್ರಗಳಲ್ಲಿ ಸೂಕ್ತ ಅವಕಾಶ<br>x) ಅಭಿವೃದ್ಧಿ ಯೋಜನೆಗಳಲ್ಲಿ ಪ್ರಾತಿನಿಧ್ಯ<br>xi) ಸಂಘರ್ಷ ತಪ್ಪಿಸುವ ಸಾಮರ್ಥ್ಯ<br>xii) ಸರ್ಕಾರದ ಯೋಜನೆಗಳ ಸದುಪಯೋಗ<br>(ಯಾವುದಾದರೂ ಆರು) $6 \times \frac{1}{2}$ | 3 |
| 53. | ಶಕ್ತಿಸಂಪನ್ಮೂಲಗಳ ಕೊರತೆಯನ್ನು ನೀಗಿಸಲು ಕೈಗೊಳ್ಳಬಹುದಾದ ಕ್ರಮಗಳಾವುವು ?<br>***ಅಥವಾ***<br>ರಸ್ತೆ ಸಾರಿಗೆಯ ತೊಡಕುಗಳಾವುವು ?<br>***ಉತ್ತರ :***<br>i) ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಹೆಚ್ಚು ಬಳಕೆ<br>ii) ಜಲ ವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯತೆ<br>iii) ಬದಲೀ ಸ್ಥಳೀಯ ಸಂಪನ್ಮೂಲಗಳ ಬಳಕೆ<br>iv) ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆಗೆ ಪ್ರೋತ್ಸಾಹ<br>v) ಶಕ್ತಿ ಸಂಪನ್ಮೂಲಗಳ ಮಿತ ಬಳಕೆಯ ಅರಿವು<br>vi) ನಿರುಪಯುಕ್ತ ವಸ್ತುಗಳಿಂದ ವಿದ್ಯುತ್ ಉತ್ಪಾದನೆ<br>***ಅಥವಾ***<br>i) ಮಳೆಗಾಲದಲ್ಲಿ ವಾಹನ ಸಂಚಾರಕ್ಕೆ ಅನುಪಯುಕ್ತ<br>ii) ಪರಿಸರ ಮಾಲಿನ್ಯಕ್ಕೆ ಕಾರಣ<br>iii) ವಾಹನ ದಟ್ಟಣೆ ಮತ್ತು ಅಪಘಾತಗಳು | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | iv) ಮಳೆ, ಚಂಡಮಾರುತ, ಪ್ರವಾಹಗಳಿಂದ ಹಾಳಾಗುತ್ತವೆ<br>v) ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳ ಅಸಮರ್ಪಕ ನಿರ್ಮಾಣ ಮತ್ತು ನಿರ್ವಹಣೆ<br>vi) ರಸ್ತೆಗಳ ಬದಿಯಲ್ಲಿ ಮೂಲಭೂತ ಅಗತ್ಯಗಳ ಕೊರತೆ | 3 |
| 54. | ಭಾರತದ ಆರ್ಥಿಕ ಪ್ರಗತಿಯಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಮುಖ ಪಾತ್ರವಹಿಸಿವೆ. ಹೇಗೆ ?<br>***ಅಥವಾ***<br>ಪಂಚಾಯತ್ ರಾಜ್ ಸಂಸ್ಥೆಗಳು ಗ್ರಾಮೀಣ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹೇಗೆ ?<br>***ಉತ್ತರ :***<br>i) ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಳ<br>ii) ತಲಾ ಆದಾಯದಲ್ಲಿ ಹೆಚ್ಚಳ<br>iii) ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ<br>iv) ಕೈಗಾರಿಕೆ ಮತ್ತು ಸೇವಾ ವಲಯಗಳ ವಿಸ್ತರಣೆ<br>v) ಬಡತನ ನಿರ್ಮೂಲನಾ ಕಾರ್ಯಕ್ರಮಗಳು<br>vi) ಉದ್ಯೋಗಾವಕಾಶಗಳ ಸೃಷ್ಟಿ<br>vii) ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಗತಿ<br>viii) ಕೃಷಿ, ಕೈಗಾರಿಕೆ, ಸೇವಾ ವಲಯಗಳಲ್ಲಿ, ತಂತ್ರಜ್ಞಾನದ ಬಳಕೆ<br>ix) ತಂತ್ರಜ್ಞಾನ ಸೇವೆಯ ರಫ್ತು<br>x) ತಯಾರಿಕಾ, ಇಂಜಿನಿಯರಿಂಗ್ ಸರಕುಗಳ ರಫ್ತು ಹೆಚ್ಚಳ<br>xi) ಎಲ್ಲರನ್ನೊಳಗೊಂಡ ಬೆಳವಣಿಗೆ<br>xii) ನಿರೀಕ್ಷಿತ ಜೀವಿತಾವಧಿಯಲ್ಲಿ ಹೆಚ್ಚಳ<br>xiii) ಸಾಕ್ಷರತಾ ಪ್ರಮಾಣದಲ್ಲಿ ಹೆಚ್ಚಳ<br>xiv) ಶಿಶುಮರಣ – ತಾಯಂದಿರ ಮರಣದರ ಇಳಿಮುಖ<br>xv) ಜನನ ಮತ್ತು ಮರಣ ಪ್ರಮಾಣದಲ್ಲಿ ಇಳಿಕೆ<br>xvi) ಜನಸಂಖ್ಯಾ ಬೆಳವಣಿಗೆ ದರದಲ್ಲಿ ಇಳಿಕೆ<br>(ಯಾವುದಾದರೂ ಆರು) 6 × ½<br>***ಅಥವಾ*** | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | i) ಗ್ರಾಮಗಳಿಗೆ ಮೂಲ ಸೌಕರ್ಯ<br>ii) ಶಿಕ್ಷಣ ಮತ್ತು ವೃತ್ತಿ ತರಬೇತಿಗೆ ಪ್ರೋತ್ಸಾಹ<br>iii) ಆರೋಗ್ಯ, ನೈರ್ಮಲ್ಯ ಸೌಲಭ್ಯಗಳ ವಿಸ್ತರಣೆ<br>iv) ಗ್ರಾಮೀಣ ಉತ್ಪಾದಕ ಚಟುವಟಿಕೆಗಳ ಅಭಿವೃದ್ಧಿ<br>(ಕೃಷಿ, ಕೋಳಿ ಸಾಕಾಣಿಕೆ, ಮೀನುಗಾರಿಕೆ ಇತ್ಯಾದಿ)<br>v) ಕೃಷಿಗೆ ನೀರಾವರಿ ವಿಸ್ತರಣೆ<br>vi) ಗುಡಿ ಕೈಗಾರಿಕೆಗಳ ಅಭಿವೃದ್ಧಿ<br>vii) ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆ<br>viii) ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ<br>ix) ಸ್ವರ್ಣ ಜಯಂತಿ ಗ್ರಾಮ ಸ್ವ–ಉದ್ಯೋಗ ಯೋಜನೆ<br>x) ವಸತಿ ಯೋಜನೆಗಳು – ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ವಸತಿ ಯೋಜನೆ<br>xi) ಸುವರ್ಣ ಗ್ರಾಮೋದಯ ಯೋಜನೆ<br>xii) ಪಡಿತರ ವ್ಯವಸ್ಥೆಯ ಬಲವರ್ಧನೆ<br>xiii) ಸಮಾಜ ಕಲ್ಯಾಣ ಸೇವೆಗಳು<br>xiv) ಮಹಿಳಾ ಸ್ವ–ಸಹಾಯ ಸಂಘಗಳ ಸಂಘಟನೆ<br>xv) ಗ್ರಾಮೀಣ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ<br>(ಯಾವುದಾದರೂ ಆರು) $6 \times \frac{1}{2}$ | 3 |
| 55. | ವಿಮಾ ಸಂಸ್ಥೆಗಳಿಂದಾಗುವ ಅನುಕೂಲಗಳನ್ನು ಪಟ್ಟಿಮಾಡಿ.<br>***ಅಥವಾ***<br>ಉದ್ಯಮಿಯ ಗುಣಲಕ್ಷಣಗಳನ್ನು ಪಟ್ಟಿಮಾಡಿ.<br>***ಉತ್ತರ :***<br>i) ಯುಕ್ತ / ವಿವೇಚನೆಯ ಲಾಭ ಗಳಿಕೆ<br>ii) ರಕ್ಷಣಾ ಮನೋಭಾವ<br>iii) ಆಸ್ತಿ ಅಥವಾ ಸ್ವತ್ತಿನ ಸುರಕ್ಷತೆ<br>iv) ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ<br>v) ಬಡವ, ಶ್ರೀಮಂತನೆಂಬ ತಾರತಮ್ಯ ಇರುವುದಿಲ್ಲ<br>vi) ಸಂಶೋಧನಾ ಕಾರ್ಯಗಳಿಗೆ ಸಹಾಯ<br>vii) ನಷ್ಟವನ್ನು ತಪ್ಪಿಸುತ್ತದೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | viii) ಆರ್ಥಿಕ ಬೆಳವಣಿಗೆಗೆ ಉತ್ತೇಜನ<br>ix) ಧೈರ್ಯ ಹೆಚ್ಚಿಸುತ್ತದೆ<br>x) ವ್ಯಾಪಾರದ ಪೈಪೋಟಿಗೆ ಉತ್ತೇಜನ<br>xi) ಅಂತರ್‌ರಾಷ್ಟ್ರೀಯ ವ್ಯಾಪಾರಕ್ಕೆ ಪ್ರೋತ್ಸಾಹ<br>xii) ಉದ್ಯೋಗಾವಕಾಶ (ಯಾವುದಾದರೂ ಆರು) 6 × ½ | 3 |
| | ***ಅಥವಾ*** | |
| | i) ಸೃಜನಾತ್ಮಕತೆ<br>ii) ಕ್ರಿಯಾತ್ಮಕತೆ<br>iii) ತಂಡ ಕಟ್ಟುವುದು<br>iv) ಸಮಸ್ಯೆಯ ಪರಿಹಾರ<br>v) ನಷ್ಟ ಭರಿತಕ್ಕೆ ಸಿದ<br>vi) ವಚನ ಬದ್ಧತೆ<br>vii) ಹೊಸ ಆವಿಷ್ಕಾರ<br>viii) ನಾಯಕತ್ವ<br>ix) ಪ್ರಚೋದನೆಯ ಸಾಧನೆ<br>x) ಗುರಿಮುಟ್ಟುವಿಕೆ<br>xi) ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು (ಯಾವುದಾದರೂ ಆರು) 6 × ½ | 3 |
| V. | ***ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :*** 1 × 4 = 4 | |
| 56. | ಸ್ವತಂತ್ರ ಭಾರತದ ಅಭಿವೃದ್ಧಿಗೆ ಜವಾಹರಲಾಲ್ ನೆಹರುರವರು ನೀಡಿರುವ ಕೊಡುಗೆಗಳನ್ನು ವಿವರಿಸಿ.<br>***ಉತ್ತರ :***<br>i) ನವಭಾರತ ಶಿಲ್ಪಿ<br>ii) ಭಾರತದ ಮೊದಲ ಪ್ರಧಾನ ಮಂತ್ರಿ<br>iii) ಸರ್ದಾರ್ ವಲ್ಲಭ್‌ಭಾಯಿ ಪಟೇಲರೊಡನೆ ಸೇರಿ ದೇಶೀಯ ಸಂಸ್ಥಾನಗಳ ವಿಲೀನೀಕರಣ<br>iv) ಭಾಷಾವಾರು ಪ್ರಾಂತ್ಯಗಳ ರಚನೆಗೆ ಕಾರಣ<br>v) ಭಾರತದ ಪ್ರಜಾಪ್ರಭುತ್ವಕ್ಕೆ ತಳಹದಿ<br>vi) ಮಿಶ್ರ ಆರ್ಥಿಕ ನೀತಿ<br>vii) ಕೈಗಾರೀಕರಣದ ಶಿಲ್ಪಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | viii) ಪಂಚವಾರ್ಷಿಕ ಯೋಜನೆಗಳ ಪ್ರಾರಂಭ<br>ix) ಅಲಿಪ್ತ ನೀತಿ<br>x) ಭಾರತದ ವಿದೇಶಾಂಗ ನೀತಿಯ ಶಿಲ್ಪಿ<br>xi) ಪಂಚಶೀಲ ತತ್ವಗಳ ಪ್ರತಿಪಾದನೆ<br>xii) ಶಾಂತಿ–ಸಹಬಾಳ್ವೆಯ ಸೂತ್ರಗಳ ಅನುಷ್ಠಾನ (ಯಾವುದಾದರೂ ಎಂಟು) 8 × ½ | 4 |
| VI. 57. | **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 3 = 4<br>a) $23\frac{1}{2}^{o}$ ಉತ್ತರ ಅಕ್ಷಾಂಶ<br>b) ನಾಗಾರ್ಜುನ ಸಾಗರ ಯೋಜನೆ<br>c) ಕೊಚ್ಚಿ | |



| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57 ರ ಬದಲಿಗೆ)*** | |
| | ಭಾರತೀಯರ ಜನಜೀವನಕ್ಕೆ ಹಿಮಾಲಯ ಪರ್ವತದಿಂದಾಗುವ ಅನುಕೂಲಗಳೇನು ? | |
| | i) ರಕ್ಷಣೆ ಒದಗಿಸಿದೆ | |
| | ii) ಶೀತಗಾಳಿಯನ್ನು ತಡೆಯುವುದು | |
| | iii) ನದಿಗಳ ಉಗಮಸ್ಥಾನ | |
| | iv) ಜಲವಿದ್ಯುತ್ ಉತ್ಪಾದನೆ | |
| | v) ವಿಶಾಲ ಮೈದಾನ ಪ್ರದೇಶದ ರಚನೆ | |
| | vi) ವೈವಿಧ್ಯಮಯ ಸಸ್ಯವರ್ಗ | |
| | vii) ಅಪಾರ ಖನಿಜ ಸಂಪನ್ಮೂಲ | |
| | viii) ಪ್ರವಾಸೋದ್ಯಮ, ಧಾರ್ಮಿಕ ಕೇಂದ್ರ | 4 |